ಹೆಸರುವಾಸಿ ಆಗಿದ್ದ.

ಅವನಿದ್ದ ಆ ತೋಪಿಗೆ ದಸ್ಯುಗಳಿಗೆ ಹೆದರಿಕೊಂಡು ಬಂತು ಜನರ ಹಿಂಡು. ಅವರನ್ನ ಅಟ್ಟಿಸಿಕೊಂಡು ರೋಷದಲ್ಲಿ ದಸ್ಯುಗಳೂ ನುಗ್ಗಿದರು. ಈ ಸತ್ಯವಾದಿ ಕೌಶಿಕನನ್ನು ಕೇಳಿದರು–

'ಈ ದಾರೀಲಿ ತುಂಬಾ ಜನ ಬಂದರಲ್ಲ, ಅವರು ಎಲ್ಲಿ ಹೋದರು, ನಿಜ ಹೇಳಿ ಬುದ್ಧೀ'

ಹಾಗೆ ಕೇಳಿದ್ದಕ್ಕೆ ಕೌಶಿಕ ಸತ್ಯದ ಮಾತು ಹೇಳಿಬಿಟ್ಟ.

ನಾನು ಸುಳ್ಳು ಹೇಳತೀನರೇನಯ್ಯಾ, ಆ ಪೊದೆ ಬಳಿ ಇರೋ ತೋಪಲ್ಲಿ ಅವಿತುಕೊಂಡಿದಾರೆ ಅಂತ ಆ ಜನಕ್ಕೆ ನಿಜ ಹೇಳಿಬಿಟ್ಟ.

ಅವರು ಹೋಗಿ ಅಲ್ಲಿದ್ದವರನ್ನು ಕ್ರೂರವಾಗಿ ಕೊಂದು ಹಾಕಿದರುಅಂತ ಕತೆ.

ಜಾಸ್ತಿ ತಿಳಿದ ಮೂಢರು ಧರ್ಮಾನ ಹೇಗೆ ಬಿಡಿಸಬೇಕು ಅಂತ ತಿಳೀದೆ ಹಿರೀರನ್ನೂ ಕೇಳದೆ ಹೋದರೆ ನೋಡು, ಇಂಥ ನರಕ ಅನುಭವಿಸಬೇಕಾಗುತ್ತೆ.

ವೇದಾನೇ ಧರ್ಮ ಅಂತ ತುಂಬಾ ಜನ ಹೇಳತಾರೆ

ಈ ಮಾತಿಗೆ ನನಗೆ ಅಸೂಯೆ ಏನೂ ಇಲ್ಲ

ಆದರೆ ಎಲ್ಲಾ ಕಡೇನೂ ಇದೇ ನಡೆಯಲ್ಲ.

ಧರ್ಮದ ಮಾತಾಡೋದು ಜೀವಿಗಳ ಏಳಿಗೆಗೆ ಅಂತ. ಅಂದರೆ ಅಹಿಂಸೆಯೇ ಧರ್ಮ ಅನ್ನೋದು ನಿಶ್ಚಯ. ಜೀವಿಗಳಿಗೆ ಹಿಂಸೆ ಆಗದಿರಲಿ ಅಂತ ತಾನೇ ಧರ್ಮ ಉಪದೇಶ ಮಾಡೋದು. ಅದು ಪೊರೆಯುತ್ತೆ, ಹೊತ್ತುಕೊಳ್ಳುತ್ತೆ, ಧರಿಸುತ್ತದೆ ಅಂತ. ಅದನ್ನ ಧರ್ಮ ಅಂತಾರೆ. ಯಾವುದು ಜನಾನ ಕಾಪಾಡತ್ತೊ ಅದೇ ಧರ್ಮ. ಅದಕ್ಕೇ ನಾನು ಹೇಳೋದು ಧರ್ಮದ ಲಕ್ಷಣ ಇದೊಂದೇನೇ. ಬರೀ ತರ್ಕದಿಂದಲೇ ತೀರ್ಮಾನ ಮಾಡಕ್ಕಾಗಲ್ಲ. ದುಷ್ಕರ ಅದು.

ಅನ್ಯಾಯಕಾರ ತನ್ನ ಸ್ವಾರ್ಥಕ್ಕೆ ನಿಜ ಕೇಳಿದ ಅನ್ನು

ಆಗ ಸುಮ್ಮನಿರೋದೇ ಮೋಕ್ಷ. ಮಾತಾಡಲೇಬಾರದು

ಮಾತಾಡಲೇಬೇಕಾಗಿ ಬಂತು, ಇಲ್ಲದಿದ್ದರೆ ಶಂಕೆ ಬರುತ್ತೆ ಅನ್ನೋದಾದರೆ ಅಲ್ಲಿ ಸುಳ್ಳನ್ನೇ ಹೇಳಬೇಕು.

ಸುಳ್ಳು ಹೇಳೋದು ತಪ್ಪು ಅಂತ ವ್ರತ ಮಾಡಿಕೊಂಡು ಹೇಳಬಾರದ ಕಡೇಲೂ ನಿಜ ಹೇಳಿದರೆ ಅದು ಒಳಿತಲ್ಲ ಅಂತಾರೆ ತಿಳಿದವರು.

ಪ್ರಾಣಾಪಾಯ, ಮದುವೆ, ನಂಟರ ಕೊಲೆ ಆಗುತ್ತಿದ್ದಾಗ ಪ್ರಣಯ ಪ್ರೀತಿ ಮಾಡೋವಾಗ ಏನು ಹೇಳಿದರೂ ತತ್ವಾರ್ಥ ತಿಳಿದವರು ಅದನ್ನ ಅಧರ್ಮ ಅನ್ನಲ್ಲ. ಧರ್ಮಕ್ಕೋಸ್ಕರ ಸುಳ್ಳು ಹೇಳಿದವನಿಗೂ ಆ ಸುಳ್ಳು ಅಂಟಲ್ಲ.

ನೋಡಪ್ಪ, ನಿನಗೆ ಯಥಾವಿಧಿ ತಿಳಿಸಿದೀನಿ. ಧರ್ಮಾ ಅನಿಸಿದ್ದನ್ನ ನನಗೆ ತಿಳಿದ ಹಾಗೆ ನಿನ್ನ ಒಳ್ಳೇದಕ್ಕೇ ತಿಳಿಸಿದೀನಿ. ಈಗ ಹೇಳು, ಯುಧಿಷ್ಠಿರನನ್ನು ಕೊಲ್ಲೋದು ಸರೀನಾ?

ಅರ್ಜುನ: ನಿನಗೆ ಗೊತ್ತಿಲ್ಲದೇ ಇರೋದು ಈ ಮೂರು ಲೋಕದಲ್ಲೂ ಇಲ್ಲ. ಈಗ ನನಗೆ ಸರಿಯಾದ ಧರ್ಮ ಯಾವುದು ಅಂತ ಹೇಳಿಬಿಡು. ಯುಧಿಷ್ಠಿರನನ್ನ ಕೊಲ್ಲಕೂಡದು ಒಪ್ಪಿಕೋತೀನಿ. ಆದರೆ ನನ್ನ ಮಾತೂ ಉಳಿಯೋಕೆ ಏನಾದರೂ ದಾರಿ ತೋರಿಸು. ಕೊಲ್ಲೋದಕ್ಕಿಂತ ಬೇರೆ ಏನಾದರೂ ಇದ್ದರೆ ಹೇಳು.

ನನ್ನ ವ್ರತ ನಿನಗೆ ಗೊತ್ತು. ಯಾರೇ ಆಗಲಿ, ನನ್ನ ಗಾಂಡೀವ ಕೊಟ್ಟು ಬಿಡೂ ಅಂತಲೋ, ಇನ್ನೊಬ್ಬ ನನಗಿಂತ ಅಸ್ತ್ರದಲ್ಲಿ ಶಕ್ತೀಲಿ ಜಾಸ್ತಿ ಅಂತಲೋ ಅಂದರೆ ನಾನು ತಡಕೊಳ್ಳಲ್ಲ, ಕೊಂದು ಬಿಡತೀನಿ. ಭೀಮನೂ ಅಷ್ಟೇ. ಅವನನ್ನು ತೂಬರಕ, ಮೀಸೆ ಇಲ್ಲದವನು ಅಂದರೆ ಕೊಂದುಬಿಡತಾನೆ. ಇವನನ್ನ ಕೊಂದ ಮೇಲೆ ಈ ಜೀವಲೋಕದಲ್ಲಿ ನಾನು ಕ್ಷಣಾನೂ ಬದುಕಿರಲ್ಲ. ಏನೇನೋ ಮಾಡಿ ಪಾಪದಿಂದ ಬಿಡಗಡೆ ಆದರೂ ರಾಜನನ್ನು ಕೊಂದೆನಲ್ಲಾ ಅಂತ ಮನಸ್ಸು ಕೊರಗತ್ತೆ ಶಕ್ತಿಯೂ ಕುಂದಿಬಿಡತ್ತೆ. ಲೋಕಕ್ಕೆ ನನ್ನ ಪ್ರತಿಜ್ಞೇನೂ ಉಳಿದಂತಾಗಬೇಕು. ನಾನೂ ಯುಧಿಷ್ಠಿರನೂ ಉಳಕೊಂಡ ಹಾಗೂ ಆಗಬೇಕು. ಅಂಥದೊಂದು ಬುದ್ಧಿ ತೋರಿಸಿಕೊಡು ಕೃಷ್ಣ.

**ಕೃಷ್ಣ:** ಕರ್ಣನ ಹರಿತವಾದ ಬಾಣ ಚುಚ್ಚೀ ಚುಚ್ಚೀ ರಾಜನಿಗೆ ಗಾಯ ಆಗಿದೆ, ಬಳಲಿದಾನೆ, ದುಃಖದಲ್ಲಿದಾನೆ. ಆ ಸೂತನ ಮಗನ ಜತೆ ತುಂಬಾ ಹೊತ್ತು ಹೋರಾಡಿ ಏಟು ತಿಂದಿದಾನೆ. ಅದಕ್ಕೇ ಅವನು ಕೋಪದಲ್ಲಿ ಏನೋ ಹೇಳಬಾರದ್ದು ಅಂದ. ನಿನ್ನನ್ನು ಕೆರಳಿಸದಿದ್ದರೆ ನೀನು ಕರ್ಣನನ್ನು ಕೊಲ್ಲಲ್ಲ ಅಂತ ಹಾಗೆಲ್ಲ ಮಾತಾಡಿದ. ಲೋಕದಲ್ಲಿ ಆ ಪಾಪಿ ಕರ್ಣನ್ನ ನೀನೊಬ್ಬನೇ ಕೊಲ್ಲೋನು ಅಂತ ಅವನಿಗೆ ಗೊತ್ತು. ಅದರಿಂದಲೇ ಕೋಪ ತುಂಬಿಕೊಂಡು ಎದುರಲ್ಲೇ ಕಟುವಾಗಿ ಮಾತಾಡಿದ.

ಬೇರೇವರಿಗೆ ತಡೆಯೋಕೆ ಆಗದ ಯುದ್ಧವನ್ನ ಕರ್ಣ ಈಗ ರಣರಂಗದಲ್ಲಿ ಶುರುಮಾಡಿಬಿಟ್ಟಿದಾನೆ. ಅವನನ್ನ ಕೊಂದರೆ ಕೌರವರನ್ನೆಲ್ಲ ಗೆದ್ದ ಹಾಗೇನೇ. ಹೀಗಂದುಕೊಂಡು ಹೇಳಿದಾನೆ ಅಷ್ಟೇನೆ.

ಈಗ ಧರ್ಮಪುತ್ರನನ್ನು ಕೊಲ್ಲಲೂ ಕೂಡದು. ನಿನ್ನ ಪ್ರತಿಜ್ಞೇನೂ ಉಳೀಬೇಕು. ಬದುಕಿದರೂ ಯಾವುದರಿಂದ ಸತ್ತ ಥರ ಆಗಬಹುದೋ ಅದನ್ನ ಹೇಳಿಕೊಡತೀನಿ ನಿನಗೆ ಈಗ ಇದೇ ತಕ್ಕನಾದದ್ದು.

ಮಾನವಂತರಿಗೆ ಎಲ್ಲೀ ತನಕ ಬೆಲೆ ಇರುತ್ತೋ ಅಲ್ಲೀ ತನಕ ಬದುಕಿರತಾರಂತೆ. ಬೆಲೆ ಹೊರಟು ಹೋದರೆ ಆವಾಗ ಜೀವಲೋಕದಲ್ಲಿ ಜೀವಿಸಿರತಾರೆ, ಬದುಕಿದ್ದರೂ ಸತ್ತ ಥರ ಆಗಿಬಿಡತಾರಂತೆ.

ನೀನು, ಭೀಮ, ಅವಳಿಗಳು ರಾಜನಿಗೆ ಸದಾ ಬೆಲೆ ಕೊಡತಿದೀರಿ. ಹಿರಿಯರಿಗೆ ಶೂರರೂ ಗೌರವ ಕೊಡತಾರೆ. ಈಗ ಸ್ವಲ್ಪ ಅವಮಾನ ಮಾಡು. ನೀನು ಯುಧಿಷ್ಠಿರನನ್ನು 'ನೀವು' ಅಂತ ಕರೀತೀಯ. ಈಗ 'ನೀನು' ಅಂತ ಅನ್ನು. ಅದೇ ಗುರುವನ್ನು ಕೊಂದ ಹಾಗೇ. ನಿನ್ನ ಸ್ವಭಾವದಲ್ಲಿಲ್ಲದ ರೀತೀಲಿ ಯುಧಿಷ್ಠಿರನ ಜತೆ ಮಾತಾಡಿದರೆ ಅದೂ ಕೊಂದ ಹಾಗೇನೇ. ಅಥರ್ವಾಂಗೀರಸ ಶ್ರುತಿ ಎಲ್ಲಕ್ಕು ಮೇಲಿನದಪ್ಪ ಅದೇ ಹೀಗೆ ಹೇಳತ್ತೆ.

ಗುರುವನ್ನು 'ನೀನು' ಅಂದರೆ ಅದು ಅವನನ್ನು ಕೊಲ್ಲದೆಯೇ ಕೊಂದ ಹಾಗೆ. ಧರ್ಮರಾಜನನ್ನು ಹಾಗಂತ ಅನ್ನು, ಅವನನ್ನು ಕೊಂದ ಹಾಗಾಗುತ್ತೆ. ಆಮೇಲೆ ಧರ್ಮಪುತ್ರನ ಕಾಲಿಗೆ ಬೀಳು, ಅವನನ್ನು ಸಂತೈಸು. ■

# ನೋಡಿದವರೆಲ್ಲಾ 'ಇವನು ಮನುಷ್ಯ ಅಲ್ಲ' ಎಂದರು

**ಸಂಜಯ:** ಆಗ

ನಿನ್ನ ಮಗ,
ರಾಜನ ತಮ್ಮ ದುಶ್ಶಾಸನ
ಅಂಜದೆ ಬಾಣ ಬಿಡುತ್ತಾ
ಭೀಮನ ಕಡೆಗೆ ಬಂದ
ಸರ್ರನೆ
ಜಿಂಕೆ ಕಂಡ ಸಿಂಹದ ಹಾಗೆ
ಭೀಮನೂ ಬಂದ

ಇಬ್ಬರ ಹೊಟ್ಟೆಯೊಳಗೂ ಪರಸ್ಪರ ರೋಷ ತುಂಬಿಕೊಂಡಿತ್ತು

ಕಾದಾಡತಾ ಕಾದಾಡತಾ ಅದು
ಇನ್ನೂ ಜೋರಾಗಿ ಉರೀತಿತ್ತು

ಇಬ್ಬರೂ ಯುದ್ಧದ ಜೂಜಿಗೆ ನಿಂತರು. ಪ್ರಾಣಾನೇ ಪಣ ಒಡ್ಡಿದರು.

ಒಬ್ಬರು ಇನ್ನೊಬ್ಬರ ಮೇಲೆ ರೋಷ ತುಂಬಿಕೊಂಡು ರಣಭಯಂಕರವಾಗಿ ಕಾದಾಡಿದರು ಇಂದ್ರ ಶಂಬರರ ಹಾಗೆ ಮಸ್ತಿಗೆ ಬಂದ ಸಲಗಗಳು ಬೆದೆ ಹತ್ತಿ ಕಾದಾಡುವ ಹಾಗೆ

ಮೈ ತುಂಬಾ ನೋವು ತುಂಬೊ ಬಾಣ ಬಿಡತಾ
ಒಬ್ಬರು ಇನ್ನೊಬ್ಬರನ್ನ ನೋಯಿಸುತ್ತಿದ್ದರು

ಒಬ್ಬರನ್ನೊಬ್ಬರು ಗುರಾಯಿಸಿಕೊಂಡು ನೋಡಿದರು.

ಭೀಮ ದುಶ್ಶಾಸನನಿಗಾಗಿ ದುಶ್ಶಾಸನ ಭೀಮನಿಗಾಗಿ ತಂತಮ್ಮ ಸಾರಥಿಗೆ 'ಹತ್ತಿರ ಹೋಗು ಇನ್ನೂ... ಇನ್ನೂ' ಅಂತ ಒಟ್ಟಿಗೇ ಹೇಳಿದರು.

ಇಬ್ಬರ ರಥಗಳೂ ಒಟ್ಟಿಗೇ ಎದುರು ಬದರಾದವು. ಅದರ ತುಂಬಾ ಬಗೆಬಗೆಯ ಆಯುಧಗಳು. ಮೇಲೆಲ್ಲಾ ನಾನಾ ಥರದ ಪತಾಕೆಗಳು.

**ಭೀಮ:** ನನ್ನ ಪುಣ್ಯ, ಕಣ್ಣಿಗೆ ಬಿದ್ದೆಯಲ್ಲ. ತುಂಬಾ ದಿನದಿಂದ ಸಾಲ ಹಾಗೇ ಉಳಿದುಕೊಂಡುಬಿಟ್ಟಿತ್ತು. ಇವತ್ತು ಬಡ್ಡೀ ಸಮೇತ ತೀರಿಸಿಬಿಡತೇನೆ. ಅವತ್ತು ದ್ರೌಪದೀನ ಸಭೆಗೆ ಎಳೆದು ತಂದೆಯಲ್ಲಾ ಆ ದಿವಸ ನಾನು ಮಾತು ಕೊಟ್ಟಿದ್ದೆ ನಿನಗೆ. ನೆನಪಿದೆಯಲ್ಲವಾ.

**ದುಶ್ಶಾಸನ:** ನಾನು ಯಾಕೆ ಮರೀಲಿ. ಎಲ್ಲಾ ನೆನಪಿದೆ ಎಲ್ಲಾ ಒಂದೊಂದಾಗಿ ಎಲ್ಲಾನೂ ಹೇಳಲಾ

ನೀವು ಅರಗಿನ ಮನೆಯಲ್ಲಿ ನನ್ನ ದೆಸೆಯಿಂದಲೇ ರಾತ್ರಿ ಹಗಲು ನರಳಾಡಿದಿರಿ, ಅದು ನೆನಪಿದೆ. ನಂಬಿಕೆ ಕಳಕೊಂಡು ಎಲ್ಲರ ಹತ್ತಿರ ಭಿ ತ್ಥ